<u>2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ದಕ್ಷಿಣ ಜಿಲ್ಲೆ, ಪೀಠ-ಕನಕಪುರ.</u>

**<u>ಪಿ ಅಂಡ್ ಎಸ್ಸಿ.5028/2025</u>**

ದಿಃ 24.07.2026
PW-2

| | | |
|---|---|---|
| ಹೆಸರು | : | ಶ್ರೀ. ಆರ್. ಮೋಹನ್ ಕುಮಾರ್ |
| ತಂದೆಯ ಹೆಸರು | : | ಲೇಟ್ ರಾಜಣ್ಣ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಪತ್ರ ಬರಹಗಾರರು |
| ವಾಸ | : | ಕುವೆಂಪುನಗರ, ಕನಕಪುರ ಟೌನ್. |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**<u>ಮುಖ್ಯವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ</u>**

ನಾನು ಈ ದಾವೆಯಲ್ಲಿ ಸಾಕ್ಷೀದಾರನಿದ್ದು, ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿವೆ ಹಾಗೂ ಅದಕ್ಕೆ ನಾನು ನನ್ನ ಸಹಿಯನ್ನು ಮಾಡಿರುತ್ತೇನೆ.

ನಾನು ಈಗ್ಗೆ ಸುಮಾರು 17 ವರ್ಷಗಳಿಂದ ಪರವಾನಿಗೆಯನ್ನು ಹೊಂದಿರುವ ಪತ್ರ ಬರಹಗಾರನಾಗಿ ಜೀವನವನ್ನು ನಡೆಸಿಕೊಂಡು ಬಂದಿರುತ್ತೇನೆ.

ಮೃತ ಸಿದ್ದೇಗೌಡ ಮತ್ತು ಆತನ ಹೆಂಡತಿಯಾದ ಮೃತ ಅಂಕಮ್ಮ ಇವರುಗಳು ತಮ್ಮ ಮೊಮ್ಮಕ್ಕಳಾದ ಅಭಿಷೇಕ್ ಮತ್ತು ಸಿದ್ದಮರಿಯಪ್ಪ ರವರ ಹೆಸರುಗಳಿಗೆ ಸರ್ವೇ ನಂ.99/14 ರ ಪೈಕಿ 0-03 ಗುಂಟೆ ಜಮೀನು, ಸರ್ವೇ ನಂ.125/9 ರ ಪೈಕಿ 0-09 ಗುಂಟೆ ಜಮೀನು, ಸರ್ವೇ ನಂ.126/2 ರ ಪೈಕಿ 0-02 ಗುಂಟೆ ಜಮೀನು, ಸರ್ವೇ ನಂ.126/2 ರ ಪೈಕಿ 0-04 ಗುಂಟೆ ಜಮೀನು, ಸರ್ವೇ ನಂ.126/7 ರ ಪೈಕಿ 0-07.04 (ಏಳು ಕಾಲು ಗುಂಟೆ) ಜಮೀನು, ಸರ್ವೇ ನಂ.126/7 ರ ಪೈಕಿ 0-06.12 (ಆರು ಮುಕ್ಕಾಲು ಗುಂಟೆ) ಜಮೀನು, ಸರ್ವೇ ನಂ.127/3 ರ ಪೈಕಿ 0-01 ಗುಂಟೆ ಜಮೀನು, ಸರ್ವೇ ನಂ.215 ರ ಪೈಕಿ 01 ಎಕರೆ 0-39.08 (ಒಂದು ಎಕರೆ ಮೂವತ್ತೊಂಭತ್ತೂವರೆ ಗುಂಟೆ) ಜಮೀನು ಹಾಗೂ ಬನವಾಸಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ

ಸೇರಿದ ಖಾನೇಷುಮಾರಿ ಸ್ವತ್ತಿನ ಸಂಖ್ಯೆಃ 226/157 ರಲ್ಲಿನ ಪೂರ್ವ-ಪಶ್ಚಿಮ 20.574 ಮೀಟರ್ ಮತ್ತು ಉತ್ತರ-ದಕ್ಷಿಣ 18.8976 ಮೀಟರ್ (169.32 ಚದರ ಮೀಟರ್) ವಿಸ್ತೀರ್ಣದ ಖಾಲಿ ನಿವೇಶನ ಮತ್ತು ಅದರಲ್ಲಿ ಕಟ್ಟಿರುವ 219.48 ಚದರ ಮೀಟರ್ ವುಳ್ಳ ಮಂಗಳೂರು ಹೆಂಚಿನ ಮನೆಗೆ ಸಂಬಂಧಿಸಿದಂತೆ ನೋಂದಾಯಿತ ಮೃತ್ಯು ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಸದರಿ ಮೃತ್ಯು ಪತ್ರವನ್ನು ಮಾಡಿಕೊಡುವ ಕಾಲಕ್ಕೆ ಮೃತ ಸಿದ್ದೇಗೌಡ ಮತ್ತು ಆತನ ಹೆಂಡತಿಯಾದ ಮೃತ ಅಂಕಮ್ಮ ರವರು ಆರೋಗ್ಯವಾಗಿದ್ದು ಅವರಿಗೆ ಕಣ್ಣು , ಕಿವಿ ಮತ್ತು ಕೈ-ಕಾಲುಗಳು ಸುಸ್ಥಿತಿಯಲ್ಲಿದ್ದವು. ಸದರಿ ಮೃತ ಸಿದ್ದೇಗೌಡ ಮತ್ತು ಆತನ ಹೆಂಡತಿಯಾದ ಮೃತ ಅಂಕಮ್ಮ ರವರು ಯಾವುದೇ ಒತ್ತಡಕ್ಕೆ ಮಣಿಯದೆ ಮತ್ತು ಯಾರ ಪ್ರಭಾವಕ್ಕೂ ಒಳಗಾಗದೇ ತಮಗೆ ಸೇರಿದ ಮೇಲೆ ಹೇಳಿದ 09 ಐಟಂಗಳ ಆಸ್ತಿಗಳನ್ನು ತಮ್ಮ ಮೊಮ್ಮಕ್ಕಳಾದ ಅಭಿಷೇಕ್ ಮತ್ತು ಸಿದ್ದಮರಿಯಪ್ಪ ರವರಿಗೆ ಮೃತ್ಯು ಪತ್ರದ ಮುಖೇನ ದಿಃ 25.11.2015 ರಂದು ಮಾಡಿಕೊಟ್ಟಿರುತ್ತಾರೆ. ಸದರಿ ಮೃತ್ಯು ಪತ್ರವನ್ನು ಮೃತ ಸಿದ್ದೇಗೌಡ ಮತ್ತು ಆತನ ಹೆಂಡತಿಯಾದ ಮೃತ ಅಂಕಮ್ಮ ರವರು ಹೇಳಿದ ರೀತ್ಯಾ ನಾನು ತಯಾರಿಸಿ ಸದರಿ ದಾಖಲೆಗೆ ನಾನು ಸಹ ನನ್ನ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯು ಮೃತ ಸಿದ್ದೇಗೌಡ ಮತ್ತು ಆತನ ಹೆಂಡತಿಯಾದ ಮೃತ ಅಂಕಮ್ಮ ಇವರುಗಳು ತಮ್ಮ ಮೊಮ್ಮಕ್ಕಳಾದ ಅಭಿಷೇಕ್ ಮತ್ತು ಸಿದ್ದಮರಿಯಪ್ಪ ರವರ ಹೆಸರಿಗೆ ಮಾಡಿಕೊಟ್ಟಿರುವ ನೋಂದಾಯಿತ ಮೃತ್ಯು ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಅರ್ಜಿದಾರರ ಪರ ಗುರ್ತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರ ಮೃತ್ಯು ಪತ್ರಕ್ಕೆ ಮೃತ ಸಿದ್ದೇಗೌಡ ಮತ್ತು ಆತನ ಹೆಂಡತಿಯಾದ ಮೃತ ಅಂಕಮ್ಮ ರವರು ತಮ್ಮ ಎಡಗೈ ಹೆಬ್ಬೆಟ್ಟಿನ ಗುರುತುಗಳನ್ನು ಮಾಡಿರುತ್ತಾರೆ. ಮೃತ ಸಿದ್ದೇಗೌಡ ಮತ್ತು ಆತನ ಹೆಂಡತಿಯಾದ ಮೃತ ಅಂಕಮ್ಮ ರವರು ತಮ್ಮ ಎಡಗೈ ಹೆಬ್ಬೆಟ್ಟಿನ ಗುರುತುಗಳನ್ನು ನಿಪಿ-1ರ ದಾಖಲೆಗೆ ಮಾಡಿದ ನಂತರ ನಾನು ಮತ್ತು ಸಾಕ್ಷೀದಾರರಾದ ಶಿವರಾಜು ಮತ್ತು ವಿಕಾಸ್ ಎಂಬುವವರು ಸಹಿಗಳನ್ನು ಮಾಡಿರುತ್ತೇವೆ. ಮೃತ ಸಿದ್ದೇಗೌಡ ರವರು ದಿನಾಂಕಃ 21.04.2016 ರಂದು ಹಾಗೂ ಮೃತ ಅಂಕಮ್ಮ ರವರು ದಿನಾಂಕಃ 22.04.2025 ರಂದು ಮೃತಪಟ್ಟಿರುತ್ತಾರೆ.

<u>ಪಾಟೀ ಸವಾಲುಃ ಎದುರುದಾರರು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು</u>.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಮಧುಸೂದನರಾಮ್ ಕೆ.ವಿ.)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ದಕ್ಷಿಣ ಜಿಲ್ಲೆ, ಪೀಠ-ಕನಕಪುರ.